



## ಭೇಟಿಯೇ ಆಗಲ್ಲ!

ಕತ್ರೀನಾ ಕೈಫ್ ಮತ್ತು ಅನೂಷ್ಕಾ ಶರ್ಮಾ ನಡುವಣ ಸಂಬಂಧ ಈಗಲೂ ಸುಧಾರಿಸಿಲ್ಲ. ಇಬ್ಬರೂ ಒಬ್ಬರನ್ನೊಬ್ಬರು ಭೇಟಿಯಾಗದೆ ಬಹಳ ಸಮಯವಾಗಿದೆ. ಆದರೆ ಇದೀಗ ಶಾರೂಕ್ ಖಾನ್ ಅಭಿನಯದ ಇನ್ನೂ ಹೆಸರಿಡದ ಹೊಸ ಚಿತ್ರದಲ್ಲಿ ಇಬ್ಬರೂ ನಟಿಸುತ್ತಿದ್ದಾರೆ. ನಿರಾಶೆಯ ಸಂಗತಿಯೆಂದರೆ, ಈ ಇಬ್ಬರೂ ಇದರಲ್ಲಿ ಒಟ್ಟಿಗೆ ನಟಿಸುವ ದೃಶ್ಯಗಳೇ ಇಲ್ಲವಂತೆ! ಇಬ್ಬರೂ ಶಾರೂಕ್ ಜತೆಗೆ ಪ್ರತ್ಯೇಕವಾಗಿ ನಟಿಸುವ ದೃಶ್ಯಗಳಿವೆ; ಹಾಗಾಗಿ ಇಬ್ಬರೂ ಭೇಟಿಯಾಗುವ ಪ್ರಶ್ನೆಯೇ ಇಲ್ಲ ಎನ್ನುತ್ತಿವೆ ಮೂಲಗಳು.

ಐದು ವರ್ಷಗಳ ಹಿಂದೆ ಯಶ್ ಚೋಪ್ರಾ ಅವರ 'ಜಬ್ ತಕ್ ಹೈ ಜಾನ್' ಚಿತ್ರದಲ್ಲಿ ಈ ಮೂವರೂ ನಟಿಸಿದ ಹಾಡು 'ಸೂಪರ್‌ಹಿಟ್' ಆಗಿತ್ತು. ಆದರೆ ಈಗೇಕೆ ಹೀಗೆ..? ಎನ್ನುವುದು ಅಭಿಮಾನಿಗಳ ಪ್ರಶ್ನೆ. ಅನೂಷ್ಕಾ ಶರ್ಮಾ ಈ ಮಧ್ಯೆ ಗೆಳೆಯ ವಿರಾಟ್ ಕೊಹ್ಲಿ ಜತೆ ನ್ಯೂಯಾರ್ಕ್‌ನಲ್ಲಿ ಮನದಣಿಯೆ ಸುತ್ತಾಡಿದ ಚಿತ್ರಗಳನ್ನು ಇನ್‌ಸ್ಟಾಗ್ರಾಮ್ ನಲ್ಲಿ ಹಾಕಿ ಖುಷಿ ಪಟ್ಟಿದ್ದಾಳೆ. ವೆಸ್ಟ್ ಇಂಡೀಸ್‌ನಲ್ಲಿ ಕ್ರಿಕೆಟ್ ಪಂದ್ಯಗಳನ್ನು ಮುಗಿಸಿದ ಕ್ಯಾಪ್ಟನ್ ಕೊಹ್ಲಿ, ಅನೂಷ್ಕಾ ಜತೆಗೆ ರಜೆ ಕಳೆಯಲೆಂದೇ ನ್ಯೂಯಾರ್ಕ್‌ಗೆ ಹೋಗಿದ್ದ. ಕೋಚ್ ಆಯ್ಕೆ ವೇಳೆಗೆ ಅಲ್ಲಿಂದಲೇ ವೀಡಿಯೊ ಕಾನ್ಫರೆನ್ಸ್ ಮಾಡಿ ಆಯ್ಕೆ ಸಮಿತಿಯ ಗಂಗೂಲಿ ಮತ್ತು ಲಕ್ಷ್ಮಣ್ ಜತೆ ಮಾತನಾಡಿದ್ದ. ನ್ಯೂಯಾರ್ಕ್‌ನಿಂದ ಈ ತಿಂಗಳ ಕೊನೆಗೆ ಕೊಹ್ಲಿ ನೇರವಾಗಿ ಶ್ರೀಲಂಕಾಗೆ ಕ್ರಿಕೆಟ್ ಆಡಲು ಹೋಗುತ್ತಾನಂತೆ. ಶಾರೂಕ್ ಜತೆಗೆ ಅನೂಷ್ಕಾ ನಟಿಸಿರುವ 'ಸಫರ್: ವೆನ್ ಹ್ಯಾರಿ ಮೆಟ್ ಸೆಜಲ್' ಚಿತ್ರದ ಪ್ರಚಾರದಲ್ಲಿ ಅನೂಷ್ಕಾ ಬ್ಯುಸಿ ಆಗಿದ್ದಾಳೆ. ಅದರಲ್ಲೂ 'ಮೈ ಬನೀ ತೇರಾ ರಾಧಾ' ಎನ್ನುವ ಹಾಡು ಈಗಾಗಲೆ ಸೂಪರ್‌ಹಿಟ್ ಆಗಿದ್ದು ಅನೂಷ್ಕಾ ಶರ್ಮಾ ಅಭಿನಯದ ಬಗ್ಗೆ ಸಾಕಷ್ಟು ನಿರೀಕ್ಷೆಗಳನ್ನು ಹುಟ್ಟಿಸಿವೆ.